**ಸಿವಿಲ್ ನ್ಯಾಯಾಧೀಶರು ಮತ್ತು ಅಧಿಕ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ**

**ಕ್ರಿಮಿನಲ್ ಮೊಖದ್ದಮೆ ಸಂಖ್ಯೆ:*873/2017***

**ಫಿರ್ಯಾದಿ:** ರಾಜ್ಯದ ಪರ ಅಜ್ಜಂಪುರ ಆರಕ್ಷಕರು

**ವಿರುದ್ಧ**

**ಆರೋಪಿಗಳು:** *1.* ಮಂಜುನಾಥ ಬಿನ್ ನಾಗಪ್ಪ, *35* ವರ್ಷ,

*2.* ನಾಗಪ್ಪ ಬಿನ್ ತಿಮ್ಮಪ್ಪ, *63* ವರ್ಷ,

*3.* ಗಂಗಮ್ಮ ಕೋಂ ನಾಗಪ್ಪ, *35* ವರ್ಷ,

ಎಲ್ಲರ ವಾಸಃ ಬಂಕನಕಟ್ಟೆ ಗ್ರಾಮ,
ತರೀಕೆರೆ ತಾಲ್ಲೂಕು.

**ದೋಷಾರೋಪಣೆ**

ಶ್ರೀಮತಿ ಪವಿತ್ರ.ಎಂ.ಡಿ ಬಿ.ಎ. ಎಲ್.ಎಲ್.ಬಿ, ಸಿವಿಲ್ ನ್ಯಾಯಾಧೀಶರು ಮತ್ತು ಅ.ಪ್ರ.ದ.ನ್ಯಾ.ದಂ., ತರೀಕೆರೆ ಆದ ನಾನು ನಿಮ್ಮಗಳ ವಿರುದ್ಧ ಮಾಡುವ ದೋಷಾರೋಪಣೆಗಳು ಏನೆಂದರೆಃ-

ದಿನಾಂಕ *14.12.2016* ರಂದು ಸಂಜೆ *5-45* ರ ಸಮಯದಲ್ಲಿ ಅಜ್ಜಂಪುರ ಪೊಲೀಸ್ ಠಾಣಾ ಸರಹದ್ದಿನ ಬಂಕನಕಟ್ಟೆ ಗ್ರಾಮದಲ್ಲಿ ಚಾಸಾ.*1* ರವರ ತಂದೆ ನಾಗಪ್ಪ ಹಾಗೂ *2*ನೇ ಹೆಂಡತಿ ಗಂಗಮ್ಮ ಹಾಗು ಮಗ ಮಂಜುನಾಥ ಇವರು ಮನೆಯ ಹಿಂಭಾಗದ ಖಾಲಿ ಜಾಗದಲ್ಲಿ ಮರಳು ಮತ್ತು ಕಲ್ಲನ್ನು ಹಾಕಿದ್ದು, ಪಿರ್ಯಾದಿ ಹಾಗೂ ತಾಯಿ ತಾನವು ಶೌಚಾಲಯ ಗುಂಡಿ ತೆಗೆಸಬೇಕು ಕಲ್ಲು ಮರಗಳನ್ನು ತೆಗೆದುಕೊಳ್ಳಿ ಎಂದು ಹೇಳಿದ್ದಕ್ಕೆ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಚಾಸಾ.*1* ರವರ ಮನೆಯ ಹತ್ತಿರ ಬಂದು ಚಾಸಾ.*1* ಮತ್ತು *2* ರವರಿಗೆ ಸೂಳೇಮುಂಡೆ, ಬೇವರ್ಸಿ ಮುಂಡೆ ನಾವು ಕಲ್ಲು ಮರಳು ತೆಗೆಯುವುದಿಲ್ಲ, ಇದು ನಮ್ಮ ಜಾಗ ಎಂದು ಅವಾಚ್ಯ ಶಬ್ಧಗಳಿಂದ ಬೈದಿದ್ದು, ಆದಕಾರಣ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ *504* ಸಹವಾಚಕ ಕಲಂ

*34* ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, ಆರೋಪಿತರಾದ ನಿಮ್ಮಗಳ ಪೈಕಿ *1*ನೇ ಆರೋಪಿಯಾದ ನೀವು ಅಲ್ಲೇ ಬಿದ್ದಿದ್ದ ದೊಣ್ಣೆಯಿಂದ ಚಾಸಾ.*1* ಮತ್ತು *2* ರವರಿಗೆ ಹೊಡೆದು ರಕ್ತಗಾಯ ಮಾಡಿದ್ದು,*2* ಮತ್ತು *3*ನೇ ಆರೋಪಿತರು ಚಾಸಾ.*2* ಮತ್ತು *3* ರವರಿಗೆ ಕಾಲಿನಿಂದ ಹೊದ್ದು ಹೊದ್ದು ಕೆಳಗೆ ಬೀಳಿಸಿ ನಂತರ *1*ನೇ ಆರೋಪಿ ಚಾಸಾ.*1* ರವರಿಗೆ ಪಾತ್ರೆಯಲ್ಲಿ ಇದ್ದ ಬಿಸಿ ಸಾರನ್ನು ಮೈ ಮೇಲೆ ಎರಚಿದ್ದು, ಆದಕಾರಣ ನೀವು ಭಾರತೀಯ ದಂಡ ಸಂಹಿತೆ ಕಲಂ *324* ಸಹವಾಚಕ ಕಲಂ *34* ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಕೊನೆಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿತರುಗಳಾದ ನೀವುಗಳು ಸಮಾನ ಉದ್ದೇಶದಿಂದ ಮುಂದುವರೆದು, ಚಾಸಾ.*1* ಮತ್ತು *2* ರವರಿಗೆ ನಿಮ್ಮನ್ನು ಇಷ್ಟಕ್ಕೆ ಸುಮ್ಮನೆ ಬಿಡುವುದಿಲ್ಲ ಕೊಲೆ ಮಾಡುತ್ತೇವೆಂದು ಪ್ರಾಣ ಬೆದರಿಕೆ ಹಾಕಿದ್ದು, ಆದಕಾರಣ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ *506* ಸಹವಾಚಕ ಕಲಂ *34* ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪಗಳ ಮೇಲೆ ಈಃ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ *30*ನೇ ಆಗಸ್ಟ್ *2018*

ಸಹಿ/-
***(ಪವಿತ್ರ.ಎಂ.ಡಿ)***
***ಸಿವಿಲ್ ನ್ಯಾಯಾಧೀಶರು ಮತ್ತು ಅಪ್ರದನ್ಯಾದಂ,***
***ತರೀಕೆರೆ.***